# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪ್ರಾದೇಶಿಕ ಸಂಪರ್ಕ ಯೋಜನೆ-ಉಡಾನ್ ಯೋಜನೆ (RCS-UDAN) ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ಒದಗಿಸಲಾಗುವ ವಿ.ಜಿ.ಎಫ್ (Viability Gap Funding), ಸೇವೆಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ನಾಗರೀಕ ವಿಮಾನಯಾನ ಮಂತ್ರಾಲಯ (MOCA) ಭಾರತ ಸರ್ಕಾರ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರ ನಡುವೆ ಮಾಡಿಕೊಂಡಿರುವ ಒಡಂಬಡಿಕೆ (MoU) ದಿನಾಂಕ:20.04.2017.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಮೂಅಇ 90 ರಾಅವಿ 2016, ದಿನಾಂಕ 28/04/2017.
3. ಸರ್ಕಾರದ ಆದೇಶ ಸಂಖ್ಯೆ: ಮೂಅಇ 22 ನಮುಯೋ 2020, ದಿನಾಂಕ:15.04.2021.
4. ಜನರಲ್ ಮ್ಯಾನೇಜರ್(ಎಫ್&ಎ)-ಆರ್‌ಸಿಎಸ್, ಪ್ರಾದೇಶಿಕ ವಿಮಾನಯಾನ ಸಂಪರ್ಕ ನಿಧಿ ಇವರ ಪತ್ರ ಸಂಖ್ಯೆ: MoCA/AAI/RCS/RACFT/VGF SHARE CLAIM/KA/25/ 2017/38, ದಿನಾಂಕ:25.06.2021.

****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಪ್ರಾದೇಶಿಕ ಸಂಪರ್ಕ ಯೋಜನೆಯನ್ನು (RCS) ರಾಜ್ಯದಲ್ಲಿ ಅನುಷ್ಠಾನಗೊಳಿಸಲು ನಾಗರೀಕ ವಿಮಾನಯಾನ ಮಂತ್ರಾಲಯ (MOCA), ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ (AAI) ಹಾಗೂ ಕರ್ನಾಟಕ ಸರ್ಕಾರದ ನಡುವೆ ದಿನಾಂಕ:20/04/2017 ರಂದು ಒಡಬಂಡಿಕೆಯನ್ನು ಮಾಡಿಕೊಂಡಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರದ ಅಧಿಸೂಚನೆಯನ್ವಯ ಸರ್ಕಾರದ RCS ವಿಮಾನ ನಿಲ್ದಾಣಗಳಿಗೆ ಭದ್ರತೆ ಮತ್ತು ಅಗ್ನಿಶಾಮಕ ಸೇವೆಯನ್ನು ಉಚಿತವಾಗಿ ಹಾಗೂ ನೀರು, ವಿದ್ಯುತ್ ಹಾಗೂ ಇತರೆ ಉಪಯುಕ್ತತಾ ಸೇವೆಗಳಿಗೆ ರಿಯಾಯಿತಿಯನ್ನು ರಾಜ್ಯ ಸರ್ಕಾರವು ಒದಗಿಸಿರುತ್ತದೆ. ಅದರಂತೆ RCS ರಡಿ ಆಯ್ಕೆಯಾಗಿರುವ ಏರ್ಲೈನ್ ಆಪರೇಟರ್ ಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ಕಾರ್ಯಸಾಧ್ಯತೆಯ ಅಂತರ್ನಿಧಿ ಮೊತ್ತ (Viability Gap Funding) ದಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇಕಡ 20 ರಷ್ಟು ವಿಜಿಎಫ್ ಮೊತ್ತವನ್ನು ಭರಿಸಬೇಕಾಗಿರುತ್ತದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿನ ಆದೇಶದಲ್ಲಿ ಲೆಕ್ಕ ಶಿರ್ಷಿಕೆ-3451-00-090-1-18-059 ಪ್ರಾದೇಶಿಕ ವಾಯು ಸಂಪರ್ಕ-ಇತರೆ ಖರ್ಚುಗಳು" ರಡಿಯಲ್ಲಿ ರೂ.4700.00 ಲಕ್ಷಗಳನ್ನು ಒದಗಿಸಲಾಗಿದ್ದು, ಸದರಿ ಲೆಕ್ಕ ಶಿರ್ಷಿಕೆಯಲ್ಲಿ ಖಜಾನೆ-2ರಡಿ ಬಿಡುಗಡೆಗೆ ರೂ 23,50,00,000/- ಮೊತ್ತ ಲಭ್ಯವಿರುತ್ತದೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ(4) ರ ಪತ್ರದಲ್ಲಿ GM (F&A)-RCS, MoCA ಇವರು ಮೆ||ಗೋಡಾವತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್; ಮೆ|| ಇಂಟರ್‌ಗ್ಲೋಬಲ್ ಏವಿಯೇಷನ್ ಲಿಮಿಟೆಡ್, ಮೆ||ಟರ್ಬೋ ಮೇಘಾ ಏರ್‌ವೇಸ್ ಪ್ರೈವೇಟ್ ಲಿಮಿಟೆಡ್, ಏರ್‌ಲೈನ್‌ಅಲೈಡ್ ಸರ್ವಿಸ್

ಲಿಮಿಟೆಡ್ ಮತ್ತು ಸ್ಪೈಸ್ ಜೆಟ್ ಲಿಮಿಟೆಡ್ ಇವರು ಚೆನ್ನೈ-ಮೈಸೂರು-ಚೆನ್ನೈ, ಹೈದ್ರಾಬಾದ್-ಬೆಳಗಾವಿ-ಹೈದ್ರಾಬಾದ್, ಬೆಳಗಾವಿ-ಮೈಸೂರು-ಬೆಳಗಾವಿ, ಬೆಳಗಾವಿ-ತಿರುಪತಿ-ಬೆಳಗಾವಿ, ಮುಂಬೈ-ಬೆಳಗಾವಿ-ಮುಂಬೈ, ಹೈದ್ರಾಬಾದ್-ಬೆಳಗಾವಿ-ಹೈದ್ರಾಬಾದ್, ಬೆಳಗಾವಿ-ಅಹಮಹದಾಬಾದ್-ಬೆಳಗಾವಿ, ಬೆಂಗಳೂರು-ಕಲಬುರಗಿ-ಬೆಂಗಳೂರು, ಕಲಬುರಗಿ-ಹಿಂಡಾನ್-ಕಲಬುರಗಿ, ಹುಬ್ಬಳ್ಳಿ-ಹಿಂಡನ್–ಹುಬ್ಬಳ್ಳಿ, ಬೆಳಗಾವಿ-ಸೂರತ್-ಬೆಳಗಾವಿ, ಬೆಳಗಾವಿ-ಪುಣೆ-ಬೆಳಗಾವಿ, ಮೈಸೂರು-ಕೊಚ್ಚಿನ್-ಗೋವಾ-ಬೆಂಗಳೂರು-ಕಲಬುರಗಿ, ಹೈದ್ರಾಬಾದ್-ಬೆಳಗಾವಿ-ಹೈದ್ರಾಬಾದ್, ಮುಂಬೈ-ಬೆಳಗಾವಿ-ಮುಂಬೈ, ಬೆಂಗಳೂರು-ಬೀದರ್-ಬೆಂಗಳೂರು, ವಿದ್ಯಾನಗರ್-ಬೆಂಗಳೂರು-ವಿದ್ಯಾನಗರ್, ಹೈದ್ರಾಬಾದ್-ಬೆಳಗಾವಿ-ಹೈದ್ರಾಬಾದ್, ಬೆಳಗಾವಿ-ಮೈಸೂರು-ಬೆಳಗಾವಿ, ಬೆಳಗಾವಿ-ತಿರುಪತಿ-ಬೆಳಗಾವಿ, ಬೆಳಗಾವಿ-ಮುಂಬೈ- ಬೆಳಗಾವಿ, ಬೆಳಗಾವಿ-ಇಂದೋರ್–ಬೆಳಗಾವಿ, ಹೈದ್ರಾಬಾದ್-ಮೈಸೂರು-ಹೈದ್ರಾಬಾದ್, ಬೆಳಗಾವಿ-ಅಹಮದಾಬಾದ್-ಬೆಳಗಾವಿ, ಬೆಳಗಾವಿ-ಮುಂಬೈ-ಇಂದೋರ್–ಬೆಳಗಾವಿ, ಬೆಂಗಳೂರು-ಕಲಬುರಗಿ-ಹಿಂಡನ್-ತಿರುಪತಿ-ಬೆಳಗಾವಿ, ಹುಬ್ಬಳ್ಳಿ-ತಿರುಪತಿ-ಹಿಂಡನ್-ಹುಬ್ಬಳ್ಳಿ, ಬೆಳಗಾವಿ-ಕಡಪ-ಬೆಳಗಾವಿ, ಕನ್ನೂರು-ಹುಬ್ಬಳ್ಳಿ-ಕನ್ನೂರು, ಬೆಳಗಾವಿ-ಕಡಪ-ಬೆಳಗಾವಿ, ಕನ್ನೂರು-ಹಬ್ಬಳ್ಳಿ-ಕನ್ನೂರು. ಮಾರ್ಗಗಳಿಗೆ ಅಕ್ಟೋಬರ್-2020, ನವೆಂಬರ್-2020, ಡಿಸೆಂಬರ್-2020 ಮತ್ತು ಜನವರಿ-21ರವರೆಗೆ ವಿಮಾನ ಯಾನ ಸೇವೆಯನ್ನು ಒದಗಿಸಲಾಗಿದ್ದು, ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂದಪಟ್ಟಂತೆ ಪಾವತಿಸಬೇಕಾಗಿರುವ ವಿಜಿಎಫ್ **ಮೊತ್ತ ರೂ.16,80,54,554/- ಮತ್ತು 1,96,79,922/- ಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ. 3,55,78,903/- (ರೂ. 3,36,10,911/-(20%) +19,67,992/-/(10%)) ಗಳನ್ನು ರಾಜ್ಯ ಸರ್ಕಾರದಿಂದ ಮರುಪಾವತಿಸುವಂತೆ ಕೋರಿರುತ್ತಾರೆ.**

5. ಪ್ರಸ್ತಾವನೆಯನ್ನು ಕೂಲಕುಂಶವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಮೂಅಇ 142 ರಾಅವಿ 2020,**
**ಬೆಂಗಳೂರು, ದಿನಾಂಕ:27.09.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ MoU ರಲ್ಲಿನ ಕ್ಲಾಸ್ ರಲ್ಲಿನ 4.2.2(e) & 4.2.3(c) ರನ್ವಯ (RCS-UDAN) ರಡಿ ಮೆ:ಇಂಟರ್ ಗ್ಲೋಬ್ ಏವಿಯೇಷನ್, ಮೆ:ಟಬೋರ್ ಮೇಘಾ ಏರ್ ವೇಸ್ ಪ್ರೈ.ಲಿ ಗೋದಾವತ್ ಎಂಟರ್ ಪ್ರೈಸೆಸ್ ಲಿ., ಹಾಗೂ ಏರ್ ಲೈನ್ ಅಲೈಡ್ ಸರ್ವಿಸಸ್ ಇವರುಗಳು ನಿರ್ವಹಿಸುವ RCS/Net work ಮಾರ್ಗಗಳಿಗೆ ವಿ.ಜಿ.ಎಫ್ ಸೇವೆಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ವಾಯು ಸಂಪರ್ಕ ನಿಧಿ ಟ್ರಸ್ಟ್ ರವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಮೊತ್ತ **ರೂ. 3,55,78,903/-** (ಮೂರು ಕೋಟಿ ಐವತ್ತೈದು ಲಕ್ಷದ ಐವತ್ತೆಂಟು ಸಾವಿರದ ಒಂಬತ್ತು ನೂರಾ ಮೂರು ರೂಪಾಯಿಗಳು ಮಾತ್ರ) ಅನುದಾನವನ್ನು ಕೆ.ಎಸ್.ಐ.ಐ.ಡಿ.ಸಿ ಮುಖಾಂತರ ನಾಗರೀಕ ವಿಮಾನಯಾನ ಮಂತ್ರಾಲಯ, ಭಾರತ ಸರ್ಕಾರ ಇವರಿಗೆ ಈ ಕೆಳಕಂಡ ಷರತ್ತಿಗೆ ಒಳಪಟ್ಟು ಮರುಪಾವತಿಸಲು ಮಂಜೂರಾತಿ ನೀಡಿದೆ.

- ಸರ್ಕಾರದ ಅಧಿಸೂಚನೆ ದಿನಾಂಕ:28.04.2017 ರನ್ವಯ ಹಾಗೂ ಉಡಾನ್ ಯೋಜನೆಯಡಿಯಲ್ಲಿನ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಇವರು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ದಿನಾಂಕ:20.04.2017 ರ ಒಪ್ಪಂದದ ಅನುಸಾರ ಕ್ರಮವಹಿಸುವುದು ಹಾಗೂ ಬಿಡುಗಡೆಗೂ ಮುನ್ನ ಪರಿಶೀಲಿಸಿ ನಂತರ ಬಿಡುಗಡೆ ಮಾಡತಕ್ಕದ್ದು.
- ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸಲ್ಲಿಸತಕ್ಕದ್ದು ಹಾಗೂ ವಿಜಿಎಫ್ ಮೊತ್ತದ ಬಗ್ಗೆ ದಾಖಲಾತಿಗಳನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

....3

2. ಈ ವೆಚ್ಚವನ್ನು 2021-22 ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಲೆಕ್ಕಶೀರ್ಷಿಕೆ "3451-00-090 1-18-059- ಪ್ರಾದೇಶಿಕ ವಾಯು ಸಂಪರ್ಕ –ಇತರೆ ಖರ್ಚುಗಳು" ರಡಿಯಲ್ಲಿ ಭರಿಸತಕ್ಕದ್ದು.

3. ಈ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ., ಬೆಂಗಳೂರು ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2021, ದಿನಾಂಕ:05.04.2021 ರಲ್ಲಿ ನೀಡಿರುವ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಸ್.ಎನ್. ಕಲಾವತಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು
ಮತ್ತು ಒಳನಾಡು ಜಲಸಾರಿಗೆ ಇಲಾಖೆ,

**ಗೆ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-1,2,3A & E), ಪ್ರಧಾನ ಮಹಾಲೇಖಪಾಲರ ಕಛೇರಿ, ಎಎಡಿ ಸೆಕ್ಷನ್, ಕೆ.ಪಿ.ಎಸ್.ಸಿ.ಕಚೇರಿ ಎದುರು, ಬೆಂಗಳೂರು,
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ಆಯುಕ್ತರು/ನಿರ್ದೇಶಕರು, ಖಜಾನೆ ಇಲಾಖೆ, ಕೆ.ಪಿ ಸಿಎಲ್ ಕಟ್ಟಡ, ಬೆಂಗಳೂರು.
4. ಯೋಜನಾ ನಿರ್ದೇಶಕರು, ಖಜಾನೆ-2, ಗಾಂಧಿನಗರ, ಬೆಂಗಳೂರು
5. ಅಪರ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಕಾರ್ಯಕ್ರಮ, ಸಂಯೋಜನೆ ಹಾಗೂ ಸಾಂಖ್ಯಿಕ ಇಲಾಖೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1,) ವಿಧಾನ ಸೌಧ, ಬೆಂಗಳೂರು.

**ಪ್ರತಿ:**

5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ, ವೆಬ್ ಸೈಟ್ ನಲ್ಲಿ ಪ್ರಕಟಿಸಲು.
8. ಶಾಖಾ ರಕ್ಷಾ ಕಡತ /ಹೆಚ್ಚುವರಿ ಪ್ರತಿಗಳು.